


ವಸುಮತಿ ಉಡುಪ
ಕಲೆ: ಎಚ್‌.ಎಸ್‌. ಮೋನಪ್ಪ

# ವಾತ್ಸಲ್ಯದ ಪಂಜರದಿಂದ ಪ್ರೇಮಲೋಕದ ಸ್ವಾತಂತ್ರ್ಯದತ್ತ...



ಅಕ್ಕನನ್ನು ಕಳೆದುಕೊಂಡ ವೆಂಕಟೇಶನ ಸಂಕಟದ ಬಗ್ಗೆ ಭಾಮ ತಾನು ಕೇಳಿದ್ದನ್ನೆಲ್ಲಾ ಗೆಳತಿಯರೊಡನೆ ಹಂಚಿಕೊಂಡಿದ್ದಳು. 'ಅಯ್ಯೋ ಪಾಪ, ಅಯ್ಯೋ ಪಾಪ...' ಎಂದು ಕೇಳಿದವರೆಲ್ಲಾ ಕನಿಕರಿಸಿದ್ದರು ಕೂಡ.

'ಅವನಿಗೆ ಧೈರ್ಯ ಹೇಳ್ಬೇಕು ನಾವು. ಅವನಿಗೆ ಸಪೋರ್ಟ್ ಆಗಿ ನಿಲ್ಬೇಕು. ಇಲ್ದಿದ್ರೆ ಅವನೂ ಇದೇ ಕೊರಗಲ್ಲಿ ಸತ್ತೋಗ್ತಾನೆ ಅನಿಸುತ್ತೆ...' ಎನ್ನುವ ಭಾಮನ ಮಾತು ಎಲ್ಲರಿಗೂ ಒಪ್ಪಿತವಾಗಿತ್ತು. 'ವಿಷಯ ಗೊತ್ತಾಯ್ತು, ಸಮಾಧಾನ ಮಾಡ್ಕೊಳ್ಳಿ' ಎನ್ನುತ್ತಾ ಹುಡುಗಿಯರ ಗುಂಪೊಂದು ಅವನಿಗೆ ಸಾಂತ್ವನ ಹೇಳಿತ್ತು. ಇಂಥದ್ದೊಂದು ದುರ್ಭರ ಸನ್ನಿವೇಶದಲ್ಲಿ ಭಾಮ ಅವನೊಡನೆ ಮಾತಾಡಿದ್ದನ್ನು, ಮಾತಾಡುವುದನ್ನು ಯಾರೂ ತಪ್ಪಾಗಿ ಅರ್ಥೈಸಿಕೊಳ್ಳಲು ಸಾಧ್ಯವಿರಲಿಲ್ಲ. ಭಾಮ ಕೂಡಾ ಯಾವ ಅಳುಕಿಲ್ಲದೆ, ಮನಸ್ಸಲ್ಲಿ ಯಾವುದೇ ಅನ್ಯಭಾವನೆಯಿಲ್ಲದೆ ಅವನನ್ನು ವಿಚಾರಿಸಿಕೊಳ್ಳುತ್ತಿದ್ದಳು. ನಿಧನಿಧಾನವಾಗಿ ವೆಂಕಟೇಶ ತನ್ನನ್ನು ಆವರಿಸಿಕೊಂಡ ದುಃಖದ ಕಾರ್ಮೋಡವನ್ನು ಸರಿಸಿಕೊಂಡು ಬಾಹ್ಯ ಪ್ರಪಂಚಕ್ಕೆ ಬಂದ. ಅನಿವಾರ್ಯವಾದ ವಾಸ್ತವವನ್ನು ಒಪ್ಪಿಕೊಂಡ. ಈ ಅವಧಿಯಲ್ಲಿ ಅವನ ಬೆನ್ನಿಗೆ ನಿಂತ ಭಾಮ ಅವನಿಗೆ ಅತ್ಯಾಪ್ತಳಾದಳು. ಮೊದಲೇ ಇದ್ದ ವಯೋಸಹಜವಾದ ಅವನ ಆಕರ್ಷಣೆಗೆ ಅವಳ ಕನಿಕರವೆಂಬುದು ಆಪ್ಯಾಯಮಾನವಾಯ್ತು. ಭಾಮ ಕೂಡ ಅವನೊಂದಿಗೆ ಒಡನಾಡುತ್ತಾ, ಅವನ ಸಾಹಚರ್ಯವನ್ನು ಇಷ್ಟಪಡುತ್ತಾ, ಪರಸ್ಪರರು ಪ್ರೀತಿಸುವ ಹಂತಕ್ಕೆ, ಒಬ್ಬರನ್ನೊಬ್ಬರು ಅಗಲಿರಲಾರೆವೆನ್ನುವ ಹಂತಕ್ಕೆ ಯಾವಾಗ ತಲುಪಿದರೆಂಬುದು ಇಬ್ಬರಿಗೂ ಅರ್ಥವಾಗದ ಚೋದ್ಯ.

ಪ್ರೀತಿ ಎಂದರೆ ಅದು ಹಾಗೇ. ಅದು ಹೇಳಿ ಕೇಳಿ ಬರುವಂಥದ್ದಲ್ಲ. ಇಂಥದ್ದೇ ನಿರ್ದಿಷ್ಟ ಕಾರಣ ಕೊಡುವಂಥದ್ದಲ್ಲ. ಬಾಹ್ಯ ರೂಪ, ಗುಣಸ್ವಭಾವ, ಜಾತಿನೀತಿಗಳನ್ನು ಮೀರಿ ಒಬ್ಬರಿನ್ನೊಬ್ಬರಿಗೆ ಅನಿವಾರ್ಯವೆನಿಸುವ ಹಂತದಲ್ಲಿ ಹರೆಯದ ಕೈವಾಡ ಮಹತ್ವಪೂರ್ಣವೆನ್ನುವುದನ್ನು ಅಲ್ಲಗಳೆಯುವಂತಿಲ್ಲ. ಭಾಮ ತನ್ನಪ್ಪನ ವಿಚಾರದಲ್ಲಿ ಮನಸ್ಸು ಕೆಡಿಸಿಕೊಂಡಿದ್ದ ಸಂದರ್ಭದಲ್ಲಿ ಅವನು ಮಾತಾಡಿಸಿಕೊಂಡು ಬಂದಿದ್ದ. ವೆಂಕಟೇಶನ ಜೀವನದ ದುರ್ಧರ ಗಳಿಗೆಯಲ್ಲಿ ಭಾಮ ಅವನಿಗೆ ಹತ್ತಿರವಾಗಿದ್ದಳು. ಮಾನಸಿಕ ಅವಲಂಬನೆಯ ಅಗತ್ಯ ಇಬ್ಬರಿಗೂ ಬೇಕಾಗಿದ್ದ ಕಾಲದಲ್ಲಿ ಒಬ್ಬರಿನ್ನೊಬ್ಬರನ್ನು ಹಚ್ಚಿಕೊಂಡಿದ್ದರೆ ಅದು ಆಶ್ಚರ್ಯವೇನಲ್ಲ. ಮೊಗ್ಗಾಗಿ ಒಡಮೂಡಿದ್ದ ಪ್ರೀತಿ ಹೂವಾಗಿ ಅರಳಲು ತನ್ನದೇ ಕಾಲ ತೆಗೆದುಕೊಂಡಿತ್ತು. ಮತ್ತು ಈ ಅವಧಿಯಲ್ಲಿ ಅವರಿಬ್ಬರೂ ಇಷ್ಟು ನಿಕಟವಾಗಿದ್ದರೆಂಬ ಗುಟ್ಟನ್ನು ಯಾರಿಗೂ ಬಿಟ್ಟುಕೊಟ್ಟಿರಲಿಲ್ಲ. ಪುಸ್ತಕಗಳ ಪುಟಗಳ ನಡುವೆ ಪ್ರೀತಿ ಪಲ್ಲವಿಸಿತ್ತು. ತನ್ನ ಇರವನ್ನು ಮತ್ತೊಬ್ಬರಿಗೆ